ಪೂರ್ಣವಾದ ಎಲ್ಲಾ ಕೆಲಸವನ್ನು ಅವನೇ ಮಾಡುತ್ತಾನೆ. ಅಂತಹವನಿಗೆ ಏನಾದರೂ ಮಾನವಿಯತೆಯ ದೃಷ್ಟಿಯಿಂದ 750 ರೂಪಾಯಿಗೆ ಗೌರವ ಧನ, ಏರಿಸದಿದ್ದರೆ ಯಾವ ಉದ್ದೇಶದಿಂದ ತಾವು ಪ್ರಾರಂಭ ಮಾಡಿದ್ದೀರಿ, ಆ ಉದ್ದೇಶ ಸಫಲವಾಗುವುದಿಲ್ಲ. ಅವನು ಬಾಗಿಲೇ ತೆಗೆಯುವುದಿಲ್ಲ. ಸರಿಯಾದ ರೀತಿಯಲ್ಲಿ ನಡೆಯದೆ ಇರುವುದಕ್ಕೆ ಅದೇ ಮೂಲ ಕಾರಣ. ಅಲ್ಲಿ ಏನು ಅವ್ಯವಸ್ಥೆ ಇದೆ ಅದಕ್ಕೆ ಇದೇ ಮೂಲವಾದ ಕಾರಣ. ಈ ವಿಚಾರ ಪತ್ರಿಕೆಗಳಲ್ಲಿ ಬರುತ್ತಿದೆ. ಸಮಯಕ್ಕೆ ಸರಿಯಾಗಿ ಬಾಗಿಲು ತೆರೆಯುವವರಿಲ್ಲ. ಅನೇಕ ಕಡೆ ಹೋರಾಟ ಮಾಡುತ್ತಿದ್ದಾರೆ. ಅದು ಅಗತ್ಯವಿಲ್ಲ. ಇದರ ಬಗ್ಗೆ ಸರ್ಕಾರ ಮುಂದಾಲೋಚನೆ ಮಾಡಿ ಅವನಿಗೆ ಬದುಕುವುದಕ್ಕೆ ಕನಿಷ್ಟ ಬೇಕಾಗುವಷ್ಟು ಗೌರವ ಧನ ಕೊಡುವುದು ಅಗತ್ಯವಿದೆಯೆಂದು ನನಗನ್ನಿಸುತ್ತದೆ. ದಯವಿಟ್ಟು ಇದನ್ನು ಪರಿಶೀಲನೆ ಮಾಡಿ 750 ರೂಪಾಯಿಗೆ ಏರಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಇವರು ದಿನಗೂಲಿ ನೌಕರರೂ ಅಲ್ಲ. ಸ್ಕೆಫಂಡರಿ ನೌಕರರು ಅಲ್ಲ. ಗೌರವಧನದ ಮೇಲೆ ಇವರನ್ನು ತೆಗೆದುಕೊಂಡಿದ್ದಾರೆ. ಇವರನ್ನು ಸರ್ಕಾರಿ ನೌಕರರೆಂದು ಯಾವ ಅಂಶದಲ್ಲಿಯೂ ಕೂಡ ಪರಿಗಣಿಸಲಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಗೌರವಧನವನ್ನಾದರೂ ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಂತಹ ಮಂಡಲಗಳಲ್ಲಿ ನೇಮಕಾತಿ ಮಾಡುವಾಗ ಜವಾಬ್ದಾರಿವುಳ್ಳ ಸರ್ಕಾರಿ ನೌಕರರನ್ನು ಮಾಡಬೇಕೇ ಅಥವಾ ಅವರನ್ನು ಗ್ರಂಥಾಲಯ ನೌಕರರಾಗಿ ಪರಿಗಣಿಸಬೇಕೇ ಎಂಬ ಪ್ರಶ್ನೆ ಏನಿದೆ ಇದು ಮೂಲಭೂತವಾದ ಪ್ರಶ್ನೆಯಾಗಿದೆ. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಇವರು ಮಂಡಲಕ್ಕೊಂದು ಗ್ರಂಥಾಲಯದ ಬಗ್ಗೆ ಮಾತನಾಡುತ್ತಿದ್ದಾರೆ. ಪ್ರತಿ ಗ್ರಾಮದಲ್ಲಿಯೂ, ಪ್ರತಿ ಕುಟುಂಬದವರೂ ಗ್ರಂಥಾಲಯ ಶುಲ್ಕವನ್ನು ಕೊಡುತ್ತಿದ್ದಾರೆ. ಅದನ್ನು ಪ್ರತಿಯಾಗಿ ತಾವು ಕನಿಷ್ಟ ಪ್ರತಿ ಗ್ರಾಮಕ್ಕೆ ಒಂದು ದಿನಪತ್ರಿಕೆಯನ್ನಾದರೂ ಕಳುಹಿಸುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಪ್ರೊ. ನಂಜುಂಡಸ್ವಾಮಿಯವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಇದನ್ನು ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಅಧ್ಯಾಪಕರ ಹುದ್ದೆಗಳ ಭರ್ತಿ

2201 - ಕೆ. ಸೋಮಪ್ಪ ಸುವರ್ಣ (ಮೂಡಬಿದ್ರಿ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಕೆಳಗಿನ ಪ್ರೌಢಶಾಲೆಗಳಲ್ಲಿ ಯಾವ ಯಾವ ಹುದ್ದೆಗಳು ಖಾಲಿ ಇವೆ.

1) ಮುಲ್ಕಿ

2) ಚಿತ್ರಾಪುರ

3) ಹಳಿಯಂಗಡಿ

4) ಮೂಡಬಿದ್ರಿ

5) ಹೊಸಬೆಟ್ಟು

6) ನಡುಗೋಡು

ಆ) ಅಧ್ಯಾಪಕರ ಕೊರತೆಯಿಂದ ಪಾಠ ಪ್ರವಚನಗಳಿಗೆ ತೊಂದರೆಯಾದ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಅಧ್ಯಾಪಕರ ನೇಮಕಾತಿ ಎಂದು ಆಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) 1) ಸರ್ಕಾರಿ ಕಿರಿಯ ಕಾಲೇಜು ಮುಲ್ಕಿ.

(ಪ್ರೌಢಶಾಲಾ ವಿಭಾಗ)

ಕನ್ನಡ - 1, ಸಂಸ್ಕೃತ - 1, ಗಣಿತ - 1, ವಿಜ್ಞಾನ - 1, ದೈಹಿಕ ಶಿಕ್ಷಣ - 2, ವೃತ್ತಿ ಶಿಕ್ಷಣ - 4, ಒಟ್ಟು - 10

2) ಚಿತ್ರಾಪುರ ಸರ್ಕಾರಿ ಪ್ರೌಢಶಾಲೆ

ಕನ್ನಡ-1, ದೈಹಿಕ ಶಿಕ್ಷಣ-1, ವಿಜ್ಞಾನ-1 , ವೃತ್ತಿಶಿಕ್ಷಕ-2, ಒಟ್ಟು-5

3) ಹಳೆಯಂಗಡಿ ಪ್ರೌಢಶಾಲಾ ವಿಭಾಗ

ಕನ್ನಡ-1, ಹಿಂದಿ-1, ಗಣಿತ - 2, ವಿಜ್ಞಾನ - 1, ಒಟ್ಟು - 5

4) ಮೂಡಬಿದ್ರಿ ಸರ್ಕಾರಿ ಪ್ರೌಢಶಾಲೆ

ಕಲಾ - 1, ಗಣಿತ - 1, ವೃತ್ತಿ ಶಿಕ್ಷಕ - 1 ಒಟ್ಟು - 3

5) ಹೊಸಬೆಟ್ಟು ಪ್ರೌಢಶಾಲೆ (ಸರ್ಕಾರಿ)

ದೈಹಿಕ ಶಿಕ್ಷಕ - 1, ವೃತ್ತಿಶಿಕ್ಷಕ - 2, ಒಟ್ಟು - 3

6) ನಡುಗೋಡು ಸರ್ಕಾರಿ ಪ್ರೌಢಶಾಲೆ

ಕಲಾ - 1, ಗಣಿತ -1, ವೃತ್ತಿಶಿಕ್ಷಕ - 2 , ಒಟ್ಟು - 4

ಆ) ಬಂದಿದೆ.

ಇ) ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಪ್ರೌಢಶಾಲಾ ಅಧ್ಯಾಪಕರ ಕೊರತೆ ಇದೆ. ಅದೇ ರೀತಿ ಪ್ರಾಥಮಿಕ ಶಾಲಾ ಅಧ್ಯಾಪಕರ ಕೊರತೆ ಇದೆ. ಈ ಕೊರತೆಗೆ ಮೂಲ ಕಾರಣ ಏನೆಂದರೆ, ನಮ್ಮ ಜಿಲ್ಲೆಗೆ ಬೇರೆ ಕಡೆಯಿಂದ ಅಧ್ಯಾಪಕರು ನೇಮಕಾತಿ ಆಗುತ್ತಾರೆ. ಅವರು ಅಲ್ಲಿನ ವಾತಾವರಣ ಒಗ್ಗದೆ ಅಲ್ಲಿಂದ ಆದಷ್ಟು ಬೇಗ ವರ್ಗಾವಣೆಯಾಗಲು ಪ್ರಯತ್ನಿಸುತ್ತಾರೆ. ಇಲ್ಲದಿದ್ದರೆ ರಜೆಯನ್ನು ಹಾಕಿಕೊಂಡು ಹೋಗುತ್ತಿದ್ದಾರೆ. ಹೀಗಾಗಿ ಅಧ್ಯಾಪಕರ ಆಯ್ಕೆಯ ಕ್ರಮದಿಂದ ನಮಗೆ ತೊಂದರೆಯಾಗಿದೆ. ನಮ್ಮಲ್ಲಿಗೆ ಬಂದಂತಹ ಅಧ್ಯಾಪಕರು ನಮ್ಮ ವಾತಾವರಣದಲ್ಲಿ ಒಗ್ಗದೆ ಅಲ್ಲಿ ಇರುವುದಿಲ್ಲ. ಹೀಗಾಗಿ ವಿದ್ಯಾಮಟ್ಟ ಬಹಳಷ್ಟು ಕುಸಿದಿದೆ. ಯಾವ ಶಾಲೆಗೆ ಹೋದರೂ ಮಕ್ಕಳು ಶಾಲೆಯಲ್ಲಿಲ್ಲದೆ ಆಟದ ಬಯಲಿನಲ್ಲಿ ಆಡುವ ಪ್ರಮೇಯ ಬಂದಿದೆ. ಅದಕ್ಕೆ ಕಾರಣವಿಷ್ಟೆ ಸಾಕಷ್ಟು ಅಧ್ಯಾಪಕರಿಲ್ಲ. ನನ್ನ ಕ್ಷೇತ್ರ ಅಥವಾ ನಮ್ಮ ಜಿಲ್ಲೆಯ ಯಾವ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಾಗಲಿ ನೋಡಿದಾಗ ಅಲ್ಲಿ ಶಿಕ್ಷಕರಿಲ್ಲದೆ ತೊಂದರೆಯಾಗಿರುವುದು ಕಂಡುಬರುತ್ತದೆ. ಈ ಸಾರಿ ಮಾನ್ಯ ವಿದ್ಯಾಸಚಿವರು ಒಂದು ಹೊಸ ರೀತಿಯ ಆಯ್ಕೆಯನ್ನು ಮಾಡಿದ್ದಾರೆ. ಪ್ರತಿ ಜಿಲ್ಲೆಯಲ್ಲಿರುವಂಥ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಮೂಲಕ ಅಧ್ಯಾಪಕರನ್ನು ಆಯ್ಕೆ ಮಾಡಿ ನೇಮಕ ಮಾಡುವುದರಿಂದ ಅಯಾ ಜಿಲ್ಲೆಯ ಅಧ್ಯಾಪಕರ ನೇಮಕವಾಗುವಂತಾಗಿದೆ. ಇದು ಪ್ರಾಥಮಿಕ ಶಾಲೆಯಲ್ಲಾಗಿದೆ. ಇದೇ ರೀತಿಯ ಅನುಕೂಲತೆಯನ್ನು ಹೈಸ್ಕೂಲ್ ಮಟ್ಟದಲ್ಲಿಯೂ ಮಾಡಿದರೆ ಈ ತೊಂದರೆ ಹೋಗುತ್ತದೆ. ಏಕೆಂದರೆ , ಆ ಜಿಲ್ಲೆಯ ಉಪಧ್ಯಾಯರು ಇದ್ದರೆ ಶಾಲಾ ಮಟ್ಟ ಖಂಡಿತ ಉತ್ತಮವಾಗುತ್ತದೆ, ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತದೆ, ಅಧ್ಯಾಪಕರಿಗೂ ಅನುಕೂಲವಾಗುತ್ತದೆ. ತಾವು

ಈ ಬಗ್ಗೆ ಏನಾದರೂ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಆಲೋಚನೆ ಮಾಡಿದ್ದೀರಾ ಎಂಬ ಬಗ್ಗೆ ತಮ್ಮ ಮೂಲಕ ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಪ್ರೌಢಶಾಲಾ ಅಧ್ಯಾಪಕರ ಕೊರತೆ ಇರುವ ಪ್ರಶ್ನೆ ಏನಿದೆ ಇದು ರಾಜ್ಯವ್ಯಾಪ್ತಿಯಾಗಿರತಕ್ಕ ಪ್ರಶ್ನೆಯಾಗಿದೆ. ಇದು ಕೇವಲ ದಕ್ಷಿಣ ಕನ್ನಡ ಜಿಲ್ಲೆ ಅಥವಾ ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಸೀಮಿತವಾದ ಪ್ರಶ್ನೆಯಲ್ಲ ಕರ್ನಾಟಕ ರಾಜ್ಯದಲ್ಲಿ ಈ ಕೊರತೆಯನ್ನು ನೀಗಿಸಲಿಕ್ಕೆ ನಾವು ಈಗಾಗಲೇ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮೊದಲನೆಯದಾಗಿ, ಶೇಕಡ 25 ರಷ್ಟು ಖಾಲಿ ಹುದ್ದೆಗಳಿಗೆ ಏನಿವೆ ಅದನ್ನು ನೇಮಕಾತಿಯ ನಿಯಮದಂತೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಡ್ತಿ ನೀಡಿ ತುಂಬಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಬಹುಶಃ 1-2 ತಿಂಗಳಲ್ಲಿ ಈ ಕಾರ್ಯಕ್ರಮ ಮುಗಿಯುತ್ತದೆ. ಅದರಲ್ಲಿ ಶೇಕಡ 25 ರಷ್ಟು ಏನು ಖಾಲಿ ಹುದ್ದೆಗಳಿವೆ ಅವನ್ನು ತುಂಬುತ್ತೇವೆ. ಎರಡನೆಯದಾಗಿ, ಉಳಿದ ಶೇಕಡ 40 ರಷ್ಟು ಹುದ್ದೆಗಳನ್ನು ಸ್ಟೈಫಂಡರಿ ಪದವೀಧರರಿಂದ ತುಂಬಲು ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದೇವೆ. ಈ ವಿಷಯವನ್ನು ಸಮಾಜ ಕಲ್ಯಾಣ ಇಲಾಖೆಗೆ ಈಗಾಗಲೇ ಬರೆದು ತಿಳಿಸಿದ್ದೇವೆ. ಆ ಪಟ್ಟಿ ಅವರಿಂದ ನಮಗೆ ಒಂದು ತಿಂಗಳ ಒಳಗೆ ಬರಬಹುದು, ಕ್ವಾಲಫೈಡ್ ಪೀಪಲ್ ಯಾರು, ಯಾರು ಅರ್ಹತೆ ಹೊಂದಿದ್ದಾರೆ ಎಂದು ಅವರಿಂದ ಪಟ್ಟಿ ಬಂದ ಕೂಡಲೇ ಆ ಹುದ್ದೆಗಳನ್ನು ತುಂಬುತ್ತೇವೆ. ಉಳಿದ ಹುದ್ದೆಗಳನ್ನು ನಾವು ನೇರ ನೇಮಕಾತಿಯ ಮೂಲಕ ಭರ್ತಿ ಮಾಡುತ್ತೇವೆ. ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ಯಾವ ರೀತಿ ತುಂಬಿದ್ದೇವೆ, ಅದೇ ಪ್ರಕಾರ ನೇರನೇಮಕಾತಿಯನ್ನು ಮಾಡಿಕೊಳ್ಳಲು ಈಗಾಗಲೇ ನಿಯಮಗಳನ್ನು ರೂಪಿಸಿ ಕಾನೂನು ಇಲಾಖೆಗೆ ಕಳುಹಿಸಿದ್ದೇವೆ. ಅದನ್ನು ಇನ್ನೊಂದು ವಾರದೊಳಗೆ ಕ್ಯಾಬಿನೆಟ್‌ಗೆ ತಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈ ದೃಷ್ಟಿಯಿಂದ 5-6 ತಿಂಗಳೊಳಗೆ ಈ ಎಲ್ಲಾ ಖಾಲಿ ಇರುವ ಹುದ್ದೆಗಳನ್ನು ತುಂಬಲಿಕ್ಕೆ ಸಾಧ್ಯವಾಗುತ್ತದೆ ಎಂಬ ನಂಬಿಕೆ ನನಗೆ ಇದೆ.

ವಿಟ್ಲ-ಮೂಡಬಿದ್ರೆಯ ವಿದ್ಯುತ್ ಸಬ್‌ಸ್ಟೇಷನ್ ಕೆಲಸವನ್ನು ಪೂರ್ಣಗೊಳಿಸುವುದು.

2221 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಮತ್ತು ಮೂಡಬಿದ್ರೆ ವಿದ್ಯುತ್ ಸಬ್-ಸ್ಟೇಷನ್ನಿನ ಕೆಲಸ ಮಂದಗತಿಯಿಂದ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?*

ಆ) *ಇದರಿಂದ ವಿಟ್ಲ ಮತ್ತು ಮೂಡಬಿದ್ರೆಯ ಪತ್ತಿರವಿರುವ ಜನರಿಗೆ ಆಗುತ್ತಿರುವ ವಿದ್ಯುತ್ ಅಡಚಣೆಯನ್ನು ಸರಿಪಡಿಸಲು ವಿಳಂಬವಾಗುವುದಿಲ್ಲವೇ?*

ಇ) *ಇದರ ಕೆಲಸವನ್ನು ತ್ವರಿತವಾಗಿ ಮಾಡಲು ಕ್ರಮ ತೆಗೆದುಕೊಂಡು ಇದನ್ನು ಎಂದು ಸಂಪೂರ್ಣಗೊಳಿಸಲಾಗುವುದು?*

ಶ್ರೀ ಎಂ.ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಮತ್ತು ಮೂಡಬಿದ್ರೆಗಳಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ನಿರ್ವಹಿಸುತ್ತಿರುವ ಉಪ ವಿದ್ಯುತ್ ಕೇಂದ್ರಗಳ ನಿರ್ಮಾಣ ಕಾರ್ಯವು ಸ್ವಲ್ಪ ಮಂದಗತಿಯಿಂದ ಸಾಗುತ್ತಿರುವುದಕ್ಕೆ ಮುಖ್ಯ ಕಾರಣ ಮುಂಗಾರಿನ ತಿಂಗಳುಗಳಲ್ಲಿ ತಲೆದೋರಿರುವ ಪ್ರತಿಕೂಲ ಹವಾಮಾನ ಪರಿಸ್ಥಿತಿ. ಆದಾಗ್ಯೂ ನಿರ್ಮಾಣ ಕಾರ್ಯವನ್ನು ಚುರುಕುಗೊಳಿಸಲಾಗುತ್ತಿದೆ.